2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ102/2016

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಹಿತೇಶ್ | ಪಿಡಬ್ಲ್ಯೂ - 3 |
| ತಂದೆಯ ಹೆಸರು | - | ಕೊರಗಪ್ಪ | ಸಿಡಬ್ಲ್ಯೂ - 6 |
| ವಯಸ್ಸು | - | 31 ವರ್ಷ | |
| ಉದ್ಯೋಗ | - | ಚಾಲಕ | |
| ವಾಸ ಸ್ಥಳ | - | ಮಂಗಳೂರು. | |

ದಿನಾಂಕಃ 27-07-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ಮೃತ ಅನಿತಾ ಮತ್ತು ಅವರ ತಾಯಿರವರ ಪರಿಚಯ ಇದೆ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. ಅನಿತಾರವರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಿಃ 27-02-2016 ರಂದು ತೀರಿಕೊಂಡಿರುತ್ತಾರೆ. ನಾನು ಆಕೆಯ ಮೃತ ದೇಹವನ್ನು ನೋಡಲು ದಿಃ 28-02-2016 ರಂದುವಿಕ್ಟೋರಿಯಾ ಆಸ್ಪತ್ರೆಯ ಶವಗಾರಕ್ಕೆ ಹೋಗಿರುತ್ತೇನೆ. ಆ ಸಮಯದಲ್ಲಿ ನನ್ನೊಂದಿಗೆ ಪ್ರವೀಣ ಮತ್ತು ವಿನೇಶ್ ಸಹ ಇದ್ದರು. ನಾವು ಮೃತ ಅನಿತಾಳ ಶವವನ್ನು ನೋಡಿರುತ್ತೇವೆ.
2. ಶವ ತನಿಖಾ ಕಾಲದಲ್ಲಿ ಅನಿತಾಳು ಗರ್ಭಿಣಿಯಾಗಿದ್ದು ಆರೋಪಿತರು ಆಕೆಯ ಹೊಟ್ಟೆಗೆ ಒದ್ದ ಕಾರಣ ಆಕೆಯ ಮಗು ತೀರಿಕೊಂಡಿದ್ದು ತೀವ್ರವಾದ ರಕ್ತಸ್ರಾವದಿಂದ ಆಕೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾಳೆ ಎಂದು ತಿಳಿದು ಬಂದಿದೆ. ಆರೋಪಿತರು ಅನಿತಾರವರಿಗೆ ವರದಕ್ಷಿಣೆ ತರುವಂತೆ ಹೇಳಿ ಹಿಂಸೆ ನೀಡುತ್ತಿದ್ದರು.
3. ದಿಃ 28-02-2016 ರಂದು ಬೆಳಿಗ್ಗೆ 9 ಗಂಟೆಯಿಂದ 12.00 ರವರೆಗೆ

ತಹಶೀಲ್ದಾರ್ ರವರು ಅನಿತಾರವರ ಶವ ಮಹಜರನ್ನು ತಯಾರಿಸಿರುತ್ತಾರೆ. ನಾನು ಸದರಿ ಶವ ಮಹಜರ ಕಾಲದಲ್ಲಿ ಹಾಜರಿದ್ದು ನನ್ನ ಸಹಿಯನ್ನು ಮಾಡಿರುತ್ತೇನೆ. ಈಗ ನೋಡುತ್ತಿರುವ ನಮೂನೆ 144 ರಲ್ಲಿ ಮತ್ತು ಶವ ಮಹಜರಿನಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಗುರುತಿಸಿದ ದಾಖಲೆಗಳನ್ನು ನಿಶಾನೆ ಪಿ.10 ಮತ್ತು ಪಿ.11 ಎಂದು ಮತ್ತು ಅವುಗಳ ಮೇಲೆ ಸಾಕ್ಷಿಯು ಗುರುತು ಹಿಡಿದ ತಮ್ಮ ಸಹಿಗಳನ್ನು ನಿಶಾನೆ ಪಿ.10(ಎ) ಮತ್ತು ಪಿ.11(ಎ) ಎಂದು ಗುರುತಿಸಲಾಯಿತು. ಶವ ಮಹಜರ ಕಾಲದಲ್ಲಿ ಅನಿತಾರವರ ಸಾವಿಗೆ ಆಕೆಯ ಗಂಡ ಮತ್ತು ಅತ್ತೆ ಕಾರಣವೆಂದು ನಾವು ಅಭಿಪ್ರಾಯ ಪಟ್ಟಿರುತ್ತೇವೆ. ನಿಶಾನೆ ಪಿ.11 ರಲ್ಲಿ ಬರೆದ ವಿಷಯಗಳೆಲ್ಲಾ ಸತ್ಯವಾಗಿದೆ. ಈಗ ನೋಡುತ್ತಿರುವ ಫೋಟೋದಲ್ಲಿ ನನ್ನ ಇರುವಿಕೆ ಕಂಡು ಬರುತ್ತದೆ. (ಸದರಿ ಫೋಟೋವನ್ನು ಗುರುತಿಸುವ ಬಗ್ಗೆ ಶ್ರೀ ಕೆ.ವಿ.ವೈ ವಕೀಲರು ಸದರಿ ಫೋಟೋವನ್ನು ಎಡಿಟ್ ಮಾಡಿದಂತೆ ಕಂಡು ಬರುತ್ತದೆ. ಹೀಗಾಗಿ ಅದನ್ನು ಗುರುತಿಸಲು ಬರುವುದಿಲ್ಲ ಎಂದು ತಮ್ಮ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಶ್ರೀ ಕೆ.ವಿ.ವೈ. ವಕೀಲರ ಆಕ್ಷೇಪಣೆಗೆ ಒಳಪಟ್ಟು ಫೋಟೋವನ್ನು ನಿಶಾನೆ ಪಿ.12 ಎಂದು ಗುರುತಿಸಲಾಯಿತು).

<u>ಪಾಟೀ ಸವಾಲು ಶ್ರೀ ಕೆ.ವಿ.ವೈ. ವಕೀಲರಿಂದ – ಆರೋಪಿತನ ಪರವಾಗಿ</u>

4. ನಾನು ಡ್ರೈವರ್ ಕೆಲಸ ಮಾಡುತ್ತೇನೆ. ಚಾಸಾ.4 ಪ್ರವೀಣ್ ಮತ್ತು ಚಾಸಾ.5 ವಿನೇಶ್ ನನ್ನ ಸ್ನೇಹಿತರು ಎನ್ನುವುದು ನಿಜ. ನನಗೆ 1 ನೇ ಆರೋಪಿ ಸಂತೋಷನನ್ನು ಅವನ ಮದುವೆಯ ದಿವಸ ಪರಿಚಯವಾಗಿರುತ್ತದೆ. ಮದುವೆಯ ದಿನ ಬಿಟ್ಟರೆ ನಾನು 1 ನೇ ಆರೋಪಿಯನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೋಡಿದ್ದೇನೆ. ಅನಿತಾ ತೀರಿಕೊಂಡ ವಿಷಯವನ್ನು ಯಾರು ತಿಳಿಸಿದ್ದಾರೆ ಎಂದರೆ ಆ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿದ್ದೆ

ಮತ್ತು ಪ್ರವೀಣ್ ರವರಿಂದ ಅನಿತಾಳ ಮರಣದ ವಿಷಯ ತಿಳಿದು ಬಂದಿದೆ. ನಾನು 27 ರ ರಾತ್ರಿ 9.00 ಗಂಟೆಗೆ ವಿಕ್ಟೋರಿಯ ಆಸ್ಪತ್ರೆಗೆ ಬಂದಿದ್ದೇನೆ. ಆ ವೇಳೆಗಾಗಲೇ ಅನಿತಾರವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆ ದಿನ ರಾತ್ರಿ ನಾನು ಮತ್ತು ವಿನೇಶ್ ಒಟ್ಟಿಗೆ ಬಂದಿದ್ದೇವೆ, ಪ್ರವೀಣ್ ರವರು ಮೊದಲೇ ಅಲ್ಲಿದ್ದರು.

5. ಆರೋಪಿತರು ಅನಿತಾರವರ ಹೊಟ್ಟೆಗೆ ಒದ್ದಿದ್ದಾರೆ ಎಂದು ನನಗೆ ಅನಿತಾರವರ ಅಕ್ಕ ಸುಧಾರವರು ಹೇಳಿದ್ದಾರೆ. ನನ್ನ ಮೇಲೆ ಮಂಗಳೂರಿನಲ್ಲಿ ಕೇಸುಗಳು ಇವೆ ಎನ್ನುವುದು ಸುಳ್ಳು. ವಿನೇಶ್ ಮತ್ತು ಪ್ರವೀಣ್ ಈಗ ಜೈಲಿನಲ್ಲಿದ್ದಾರೆ ಎಂದು ಕೇಳಿ ತಿಳಿದಿದ್ದೇನೆ. ಆದರೆ ಎಷ್ಟು ದಿನಗಳಿಂದ ಜೈಲಿನಲ್ಲಿದ್ದಾರೆ ಎಂದು ಮಾಹಿತಿ ಇಲ್ಲ. ನಾನು ಪ್ರವೀಣನ ಜೊತೆ ಭೂ ವ್ಯವಹಾರ ನಡೆಸುತ್ತೇನೆ ಎನ್ನುವುದು ನಿಜ. ಆದರೆ ವಿನೇಶ್ ರವರು ನಮ್ಮೊಂದಿಗೆ ಪಾಲುದಾರರು ಅಲ್ಲ.

6. ನಾನು ನಿಶಾನೆ ಪಿ.10(ಎ) ಮತ್ತು 11(ಎ) ಸಹಿಗಳನ್ನು ಶವಗಾರದ ವರಾಂಡದಲ್ಲಿ ಮಾಡಿದ್ದೇನೆ. ಸದರಿ ಸಹಿಗಳನ್ನು ಮಾಡುವ ಕಾಲದಲ್ಲಿ 1 ನೇ ಆರೋಪಿ ಸಂತೋಷ ಎಲ್ಲಿದ್ದರು ಅಂತ ನನಗೆ ಗೊತ್ತಿಲ್ಲ. ನಾನು ಆರೋಪಿ ಸಂತೋಷನನ್ನು ನಿಶಾನೆ ಪಿ.11 ಆದ ನಂತರದ ಮಧ್ಯಾಹ್ನ 12.00 ರ ವೇಳೆಗೆ ವಿಕ್ಟೋರಿಯ ಆಸ್ಪತ್ರೆಯ ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ಆ ಸಮಯದಲ್ಲಿ 1 ನೇ ಆರೋಪಿಯು ತನ್ನ ತಾಯಿಯಾದ 2 ನೇ ಆರೋಪಿಯೊಂದಿಗೆ ಇದ್ದರು. ಅನಿತಾರವರ ಶವವನ್ನು ತೆಗೆದುಕೊಂಡು ಹೋಗುವಾಗ 1 ನೇ ಆರೋಪಿ ಎಲ್ಲಿದ್ದರು

ಎಂದು ನಾನು ನೋಡಿಲ್ಲ.

7. ನಾನು ನಿಶಾನೆ ಪಿ.10 ಮತ್ತು 11 ಕ್ಕೆ ವಿಕ್ಟೋರಿಯ ಆಸ್ಪತ್ರೆಯ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎನ್ನುವುದು ಸುಳ್ಳು. ನಿಶಾನೆ ಪಿ.11 ರಲ್ಲಿ ಬರೆದ ವಿಷಯಗಳನ್ನು ನನಗೆ ಓದಿ ಹೇಳಿದ್ದಾರೆ ಮತ್ತು ಅದರಲ್ಲಿ ಬರೆದ ವಿಷಯಗಳು ಗೊತ್ತಿದೆ. ಆ ಸಮಯದಲ್ಲಿ ನನ್ನ, ಪ್ರವೀಣ್ ಮತ್ತು ವಿನೇಶ್ ಹೊರತಾಗಿ ಇಬ್ಬರು ಪೊಲೀಸರು ಸಹ ಇದ್ದರು. ನನಗೆ ನಿಶಾನೆ ಪಿ.11 ರ ವಿಚಾರಗಳು ಗೊತ್ತಿಲ್ಲ ಎನ್ನುವುದು ಸುಳ್ಳು. ನಾನು ನನ್ನ ಸ್ನೇಹಿತ ಪ್ರವೀಣ್ ಹೇಳಿದಂತೆ ಸಹಿ ಮಾಡಿದ್ದೇನೆ ಎನ್ನುವುದು ಸುಳ್ಳು ಆರೋಪಿತರು ಅನಿತಾಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಸಹ ಪ್ರವೀಣ್ ನ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

8. ಈಗ ನೋಡುತ್ತಿರುವ ಫೋಟೋ ನಿಶಾನೆ ಪಿ.12. ಸದರಿ ಫೋಟೋದಲ್ಲಿ ನನ್ನ ಕಾಲು ಎಲ್ಲಿದೆ ಎಂದರೆ ನೆಲದ ಮೇಲೆ ಇದೆ. ನಾನು ನಿಶಾನೆ ಪಿ.11 ರ ಕಾಲದಲ್ಲಿ ಸ್ಥಳದಲ್ಲಿ ಇರಲಿಲ್ಲ ಎನ್ನುವುದು ಸುಳ್ಳು . ಮತ್ತು ಈ ಕಾರಣದಿಂದಲೇ ನಿಶಾನೆ ಪಿ.12 ರಲ್ಲಿ ನಮ್ಮನ್ನು ಆನಂತರ ಸೇರಿಸಿ ಸೃಷ್ಟಿಸಲಾಗಿದೆ ಎನ್ನುವುದು ಸುಳ್ಳು.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಕೆ.ಎಲ್. ಅಶೋಕ್)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಚಿಕ್ಕಮಗಳೂರು.

ಸಿಸಿಕೆ